# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಎಂ. ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 955 |
| ಉತ್ತರಿಸಬೇಕಾದ ದಿನಾಂಕ | : | 24.02.2023 |
| ಉತ್ತರಿಸುವ ಸಚಿವರು | : | ಕಾರ್ಮಿಕ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಕೈಗಾರಿಕೆಗಳಲ್ಲಿ ಮತ್ತು ವಾಣಿಜ್ಯ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ನೌಕರರು/ ಕಾರ್ಮಿಕ ವರ್ಗದವರಿಗೆ ಉದ್ಯೋಗದಾತರು ಸಕಾಲದಲ್ಲಿ ಪೂರ್ಣ ವೇತನ/ ಸಂಬಳ ಪಾವತಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. |
| ಆ) | ಬಂದಿದ್ದಲ್ಲಿ, ದುಡಿಯುವ ವರ್ಗದವರಿಗೆ ಸಕಾಲದಲ್ಲಿ ಉದ್ಯೋಗದಾತರಿಂದ ವೇತನ ವಿತರಿಸಲು ಸರ್ಕಾರದ ವತಿಯಿಂದ ಕೈಗೊಂಡಿರುವ ಕ್ರಮಗಳೇನು; | ದುಡಿಯುವ ವರ್ಗದವರಿಗೆ ಸಕಾಲದಲ್ಲಿ ಉದ್ಯೋಗದಾತರಿಂದ ವೇತನ ವಿತರಿಸಲು ವಿಳಂಬದ ಕುರಿತು ದೂರುಗಳು ಸ್ವೀಕೃತವಾದಲ್ಲಿ, ವೇತನ ಪಾವತಿ ಕಾಯ್ದೆ, 1936ರಡಿ ಅಧಿಸೂಚಿಸಲ್ಪಟ್ಟ ನಿರೀಕ್ಷಕರು ನಿಯಮಾನುಸಾರ ಪರಿಶೀಲಿಸಿ, ತಪಾಸಣೆ ನಡೆಸಿ, ಉಲ್ಲಂಘನೆಗಳು ಕಂಡುಬಂದಲ್ಲಿ ಸದರಿ ಕಾಯ್ದೆಯಡಿ ಅಧಿಸೂಚಿಸಲ್ಪಟ್ಟ ಸಕ್ಷಮ ಪ್ರಾಧಿಕಾರಿಗಳ ಮುಂದೆ ಕ್ಲೇಮ್ ಅರ್ಜಿಗಳನ್ನು ಸಲ್ಲಿಸುತ್ತಾರೆ. ತದನಂತರ, ಕ್ಲೇಮ್ ಪ್ರಾಧಿಕಾರಿಗಳು ಸೆಕ್ಷನ್ 15 ರಡಿ ಸದರಿ ಕ್ಲೇಮ್ ಅರ್ಜಿಗಳನ್ನು ಪರಿಶೀಲಿಸಿ, ವಿಚಾರಣೆ ನಡೆಸಿ, ವೇತನದ ಜೊತೆಗೆ ಪರಿಹಾರವನ್ನು ಪಾವತಿಸಲು ಸಂಬಂಧಿಸಿದ ಗುತ್ತಿಗೆದಾರರು/ಸಂಸ್ಥೆಗಳಿಗೆ ನಿರ್ದೇಶನಗಳನ್ನು ನೀಡುತ್ತಾರೆ ಹಾಗೂ ಕರ್ನಾಟಕ ವೇತನ ಪಾವತಿ ನಿಯಮಾವಳಿಯ ನಿಯಮ 20 ರನ್ವಯ ವೇತನ ಪಾವತಿಯನ್ನು ವಿಳಂಬಗೊಳಿಸಿದ ವ್ಯಕ್ತಿಯ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು. |
| ಇ) | ಕಳೆದ ಮೂರು ವರ್ಷಗಳಲ್ಲಿ ಸಕಾಲದಲ್ಲಿ ವೇತನ ಪಾವತಿಸದಿರುವ ಉದ್ಯೋಗದಾತರ ಮೇಲೆ ಒಟ್ಟು ಎಷ್ಟು ದೂರುಗಳನ್ನು ಕಾರ್ಮಿಕ ಇಲಾಖೆಯಲ್ಲಿ ಸ್ವೀಕರಿಸಲಾಗಿದೆ ಹಾಗೂ ಇವುಗಳಲ್ಲಿ ಎಷ್ಟು ಪ್ರಕರಣಗಳಲ್ಲಿ ದುಡಿಯುವ ವರ್ಗದವರಿಗೆ ನ್ಯಾಯ ದೊರಕಿಸಿಕೊಡಲಾಗಿದೆ? (ಜಿಲ್ಲಾವಾರು ಮಾಹಿತಿ ನೀಡುವುದು) | ಸಕಾಲದಲ್ಲಿ ವೇತನ ಪಾವತಿಸದಿರುವ ಉದ್ಯೋಗದಾತರ ವಿರುದ್ಧ ಕಳೆದ ಮೂರು ವರ್ಷಗಳಲ್ಲಿ ಒಟ್ಟು 11032 ಕಾರ್ಮಿಕರಿಗೆ ಸಂಬಂಧಿಸಿದಂತೆ ರೂ.50,66,44,173-93 ಮೊತ್ತದ 1787 ಕ್ಲೇಮ್ ಅರ್ಜಿಗಳನ್ನು ಸಕ್ಷಮ ಪ್ರಾಧಿಕಾರಿಗಳ ಮುಂದೆ ದಾಖಲಿಸಲಾಗಿರುತ್ತದೆ ಹಾಗೂ ಸದರಿ ಪ್ರಾಧಿಕಾರಿಗಳು ಕ್ಲೇಮ್ ಅರ್ಜಿಗಳ ವಿಚಾರಣೆ ನಡೆಸಿ, ಕಳೆದ ಮೂರು ವರ್ಷಗಳಲ್ಲಿ ರೂ. 19,76,47,972-00 ಮೊತ್ತಕ್ಕೆ ಆದೇಶ ಹೊರಡಿಸಿ, ಒಟ್ಟು 672 ಕ್ಲೇಮ್ ಅರ್ಜಿಗಳನ್ನು ವಿಲೇವಾರಿ ಮಾಡಿ, ಒಟ್ಟು 1420 ಕಾರ್ಮಿಕರಿಗೆ ರೂ.2,68,22,275-00 ಗಳನ್ನು ವಿತರಿಸಿರುತ್ತಾರೆ (ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1 ರಲ್ಲಿ ಸಲ್ಲಿಸಿದೆ). |

**ಸಂಖ್ಯೆ: ಕಾಇ 80 ಎಲ್‌ಡಬ್ಲ್ಯೂಎ 2023**

(ಅರಬೈಲ್ ಶಿವರಾಮ್ ಹೆಬ್ಬಾರ್)
ಕಾರ್ಮಿಕ ಸಚಿವರು

ಅನುಬಂಧ-1

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು)

ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 955

ಕಳೆದ ಮೂರು ವರ್ಷದ ಅವಧಿಯಲ್ಲಿ ವೇತನ ಪಾವತಿ ಕಾಯ್ದೆ 1936ರಡಿ ದಾಖಲಾದ ಕ್ಲೇಮ್ ಅರ್ಜಿಗಳ ಜಿಲ್ಲಾವಾರು ವಿವರ

| ಕ್ರ. ಸಂ. | ಜಿಲ್ಲೆ | ದಿನಾಂಕ:01-04-2020 ರಂದು ವೇ.ಪಾ.ಕಾ. ಯಡಿ ಬಾಕಿ ಇದ್ದ ಕ್ಲೇಮ್ ಅರ್ಜಿಗಳ ಸಂಖ್ಯೆ | ದಿನಾಂಕ:01-04-2020 ರಿಂದ ದಿನಾಂಕ:31-01-2023 ರ ಅವಧಿಯಲ್ಲಿ ಸ್ವೀಕೃತವಾದ ಕ್ಲೇಮ್ ಅರ್ಜಿಗಳ ಸಂಖ್ಯೆ | ಒಟ್ಟು ಕ್ಲೇಮ್ ಅರ್ಜಿಗಳ ಸಂಖ್ಯೆ | ಕ್ಲೇಮ್ ಮೊತ್ತ (ರೂ.ಗಳಲ್ಲಿ) | ಕಾರ್ಮಿಕರ ಸಂಖ್ಯೆ | ವಿಲೇವಾರಿ ಮಾಡಲಾದ ಕ್ಲೇಮ್ ಅರ್ಜಿಗಳ ಸಂಖ್ಯೆ | ಆದೇಶಿಸಲಾದ ಮೊತ್ತ (ರೂ.ಗಳಲ್ಲಿ) | ವಿತರಿಸಿದ ಮೊತ್ತ (ರೂ.ಗಳಲ್ಲಿ) | ಪರಿಹಾರ ಪಡೆದ ಕಾರ್ಮಿಕರ ಸಂಖ್ಯೆ |
|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 |
| 1 | ಕಲಬುರಗಿ | 400 | 19 | 419 | 1,01,74,754.00 | 111 | 10 | 16,62,004.00 | 3,91,256.00 | 9 |
| 2 | ಬೀದರ್ | 1 | 5 | 6 | 35,35,393.60 | 97 | 0 | - | - | 0 |
| 3 | ಯಾದಗಿರಿ | 0 | 1 | 1 | 81,109.00 | 1 | 0 | - | - | 0 |
| 4 | ರಾಯಚೂರು | 19 | 2 | 21 | 1,46,63,464.00 | 63 | 0 | - | - | 0 |
| 5 | ಕೊಪ್ಪಳ | 4 | 13 | 17 | 64,26,531.00 | 195 | 2 | 2,11,500.00 | 1,15,500.00 | 77 |
| 6 | ಬಳ್ಳಾರಿ | 10 | 21 | 31 | 50,83,993.33 | 59 | 2 | - | - | 0 |
| 7 | ದಾವಣಗೆರೆ | 4 | 17 | 21 | 1,03,40,872.00 | 146 | 13 | 11,03,532.00 | 1,14,701.00 | 1 |
| 8 | ಚಿತ್ರದುರ್ಗ | 2 | 6 | 8 | 9,09,132.00 | 12 | 3 | 58,698.00 | - | 1 |
| 9 | ವಿಜಯನಗರ | 0 | 5 | 5 | 71,01,433.00 | 52 | 0 | - | - | 0 |
| 10 | ಬೆಳಗಾವಿ | 19 | 60 | 79 | 7,04,77,093.00 | 624 | 44 | 4,23,36,133.00 | 25,48,320.00 | 258 |
| 11 | ಬಾಗಲಕೋಟೆ | 12 | 19 | 31 | 6,57,77,897.00 | 1321 | 16 | 19,18,986.00 | 3,22,000.00 | 0 |
| 12 | ವಿಜಯಪುರ | 1 | 13 | 14 | 2,63,18,550.00 | 621 | 10 | 4,88,02,964.00 | 1,18,000.00 | 2 |
| 13 | ಧಾರವಾಡ | 8 | 103 | 111 | 6,77,07,327.00 | 2751 | 62 | 3,55,07,331.00 | 1,36,63,464.00 | 27 |
| 14 | ಗದಗ | 2 | 16 | 18 | 78,62,461.00 | 103 | 14 | 93,96,263.00 | - | 113 |
| 15 | ಹಾವೇರಿ | 0 | 2 | 2 | 23,79,854.00 | 113 | 6 | 66,62,792.00 | 22,000.00 | 0 |
| 16 | ಕಾರವಾರ | 0 | 4 | 4 | 29,81,712.00 | 42 | 2 | 28,89,020.00 | - | 1 |
| 17 | ಚಿಕ್ಕಮಗಳೂರು | 5 | 21 | 26 | 22,92,105.00 | 32 | 15 | 96,04,274.00 | 6,81,170.00 | 9 |
| 18 | ಹಾಸನ | 82 | 38 | 120 | 2,12,95,161.00 | 199 | 72 | 59,11,190.00 | 7,80,464.00 | 112 |
| 19 | ಕೊಡಗು | 13 | 15 | 28 | 18,04,818.00 | 31 | 31 | 2,79,628.00 | 2,24,747.00 | 8 |
| 20 | ದಕ್ಷಿಣ ಕನ್ನಡ | 25 | 70 | 95 | 1,38,40,810.00 | 328 | 65 | 53,74,771.00 | 14,23,721.00 | 152 |
| 21 | ಉಡುಪಿ | 28 | 58 | 86 | 2,24,62,762.00 | 641 | 71 | 36,11,035.00 | 13,02,744.00 | 330 |
| 22 | ಶಿವಮೊಗ್ಗ | 36 | 52 | 88 | 91,48,764.00 | 138 | 62 | 10,33,758.00 | 6,56,402.00 | 108 |
| 23 | ಬೆಂಗಳೂರು ನಗರ | 216 | 197 | 413 | 10,99,24,812.00 | 2838 | 148 | 1,61,74,496.00 | 33,45,279.00 | 127 |
| 24 | ಬೆಂಗಳೂರು ಗ್ರಾಮಾಂತರ | 63 | 7 | 70 | 17,78,858.00 | 32 | 4 | 56,000.00 | - | 0 |
| 25 | ತುಮಕೂರು | 10 | 19 | 29 | 11,05,059.00 | 13 | 3 | 2,72,201.00 | 1,84,456.00 | 1 |
| 26 | ರಾಮನಗರ | 16 | 6 | 22 | 29,11,377.00 | 215 | 9 | 3,16,921.00 | - | 0 |
| 27 | ಮೈಸೂರು | 3 | 13 | 16 | 1,66,79,209.00 | 229 | 5 | 44,64,475.00 | 4,95,851.00 | 67 |
| 28 | ಮಂಡ್ಯ | 2 | 2 | 4 | 4,35,945.00 | 9 | 3 | - | 4,32,200.00 | 17 |
| 29 | ಚಿಕ್ಕಬಳ್ಳಾಪುರ | 0 | 0 | 0 | - | 0 | 0 | - | - | 0 |
| 30 | ಕೋಲಾರ | 0 | 1 | 1 | 2,69,318.00 | 2 | 0 | - | - | 0 |
| 31 | ಚಾಮರಾಜನಗರ | 0 | 1 | 1 | 8,73,600.00 | 14 | 0 | - | - | 0 |
| | ಒಟ್ಟು | 981 | 806 | 1787 | 50,66,44,173.93 | 11032 | 672 | 19,76,47,972.00 | 2,68,22,275.00 | 1420 |